1. ಈ ಕೆಳಗಿನ ಪಟ್ಟಿ-I ನ್ನು (ದೇಶಗಳು) ಪಟ್ಟಿ-II ರ (ಪ್ರಧಾನ ಮಂತ್ರಿಗಳು) ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ – I (ದೇಶಗಳು) | ಪಟ್ಟಿ – II (ಪ್ರಧಾನ ಮಂತ್ರಿಗಳು) |
|---|---|
| (a) ಜಪಾನ್ | (i) ಆಂಥೋಣಿ ಅಲ್ಬನೀಸ್ |
| (b) ಯುನೈಟೆಡ್ ಕಿಂಗ್‌ಡಮ್ | (ii) ಕ್ರಿಸ್ಟೋಫರ್ ಲಕ್ಸನ್ |
| (c) ಆಸ್ಟ್ರೇಲಿಯಾ | (iii) ಸನೇ ತಕ್ಕೈಚಿ |
| (d) ನ್ಯೂಜಿಲ್ಯಾಂಡ್ | (iv) ಆ್ಯಂಡಿ ಬರ್ನ್‌ಹ್ಯಾಮ್ |

(1) (a) – (ii) (b) – (i) (c) – (iv) (d) – (iii)
(2) (a) – (iv) (b) – (iii) (c) – (ii) (d) – (i)
(3) (a) – (iii) (b) – (iv) (c) – (i) (d) – (ii)
(4) (a) – (iv) (b) – (ii) (c) – (iii) (d) – (i)

2. ಕೊಬಾಲ್ (COBOL) ಸೃಷ್ಟಿಗೆ ಕಾರಣರಾದ ಗ್ರೇಸ್ ಹಾಪರ್ ಅವರ ಕೊಡುಗೆಯ ಸ್ಮರಣೆಗಾಗಿ ಇತ್ತೀಚೆಗೆ ಯಾವ ಕಂಪ್ಯೂಟರ್‌ನ 75ನೇ ವರ್ಷಾಚರಣೆಯನ್ನು ಆಚರಿಸಲಾಯಿತು ?

(1) EDVAC (ಎಡ್‌ವಾಕ್)
(2) ENIAC (ಎನಿಯಾಕ್)
(3) Colossus (ಕೊಲೊಸ್ಸಸ್)
(4) UNIVAC I (ಯುನಿವಾಕ್ - I)

3. ಈ ಕೆಳಗಿನ ಪಟ್ಟಿ – I ನ್ನು ಪಟ್ಟಿ – II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ – I (ಮುಖ್ಯಮಂತ್ರಿಗಳು) | ಪಟ್ಟಿ – II (ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು) |
|---|---|
| (a) ವಿ.ಡಿ. ಸತೀಶನ್ | (i) ತಮಿಳುನಾಡು |
| (b) ಸಿ. ಜೋಸೆಫ್ ವಿಜಯ್ | (ii) ನವದೆಹಲಿ |
| (c) ಸುವೇಂದು ಅಧಿಕಾರಿ | (iii) ಕೇರಳ |
| (d) ರೇಖಾ ಗುಪ್ತಾ | (iv) ಪಶ್ಚಿಮ ಬಂಗಾಳ |

(1) (a) – (iii) (b) – (i) (c) – (ii) (d) – (iv)
(2) (a) – (iii) (b) – (i) (c) – (iv) (d) – (ii)
(3) (a) – (iii) (b) – (iv) (c) – (i) (d) – (ii)
(4) (a) – (ii) (b) – (i) (c) – (iii) (d) – (iv)

4. ಶಿವನಸಮುದ್ರ ಜಲವಿದ್ಯುತ್ ಯೋಜನೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ/ಗಳು ಸರಿಯಾಗಿದೆ/ವೆ ?

(a) ಸ್ವಾತಂತ್ರ್ಯ ಪೂರ್ವದಲ್ಲಿ ಇದು ಭಾರತದಲ್ಲೇ ಅತಿ ದೊಡ್ಡ ಜಲವಿದ್ಯುತ್ ಯೋಜನೆಯಾಗಿತ್ತು.
(b) ಇಲ್ಲಿ ಉತ್ಪಾದಿಸಿದ ವಿದ್ಯುತ್ತನ್ನು ಮೊದಲು ಕೋಲಾರದ ಚಿನ್ನದ ಗಣಿಗೆ ನೀಡಲಾಯಿತು.
(c) ಹೆಚ್ಚುವರಿ ವಿದ್ಯುತ್ತನ್ನು ಬೆಂಗಳೂರಿಗೆ ಪೂರೈಸಲಾಯಿತು.
(d) ಆ ಅವಧಿಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಮೈಸೂರಿನ ರಾಜರಾಗಿದ್ದರು.

(1) (a), (b) ಮತ್ತು (c)
(2) (a) ಮಾತ್ರ
(3) (a), (b), (c) ಮತ್ತು (d)
(4) (b), (c) ಮತ್ತು (d)

5. 2026 ರ ಪದ್ಮ ಪ್ರಶಸ್ತಿ ವಿಜೇತರ ಹೆಸರುಗಳು ಮತ್ತು ಅವರು ಹಿಂದೆ ಹೊಂದಿದ್ದ ಹುದ್ದೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಜೋಡಿಗಳನ್ನು ಪರಿಗಣಿಸಿ.

(a) ಜಗದೀಶ್ ಕುಮಾರ್ – ಯುಜಿಸಿಯ ಹಿಂದಿನ ಅಧ್ಯಕ್ಷರು
(b) ಶಶಿಶೇಖರ್ ವೆಂಪತಿ – ಐಸಿಎಆರ್‌ನ ಹಿಂದಿನ ಅಧ್ಯಕ್ಷರು
(c) ಬುದ್ಧ ಕೃಷ್ಣಮಣಿ – ಪ್ರಸಾರ ಭಾರತಿಯ ಹಿಂದಿನ ಅಧ್ಯಕ್ಷರು

ಮೇಲೆ ನೀಡಲಾದ ಜೋಡಿಗಳಲ್ಲಿ ಯಾವುದು/ಯಾವುವು ತಪ್ಪಾಗಿ ಹೊಂದಾಣಿಕೆಯಾಗಿದೆ ?

(1) (a) ಮತ್ತು (b) ಮಾತ್ರ
(2) (a) ಮಾತ್ರ
(3) (a) ಮತ್ತು (c) ಮಾತ್ರ
(4) (b) ಮತ್ತು (c) ಮಾತ್ರ

ಕಚ್ಚಾ ಕಾರ್ಯಕ್ಕಾಗಿ ಸ್ಥಳ

6. ಪಟ್ಟಿ – I ಅನ್ನು ಪಟ್ಟಿ – II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ – I (ಬುಡಕಟ್ಟು ಜನರು) | | ಪಟ್ಟಿ – II (ವಾಸದ ಪ್ರದೇಶ) | |
|---|---|---|---|
| (a) | ಪಿಗ್ಮಿಗಳು | (i) | ಅರೇಬಿಯಾದ ಮರುಭೂಮಿ |
| (b) | ಬೆಡೊಯಿನ್ನರು | (ii) | ಕಾಂಗೋ ಜಲಾನಯನ ಪ್ರದೇಶ |
| (c) | ಬುಶ್‌ಮನ್ನರು | (iii) | ಮಧ್ಯ ಏಷ್ಯಾ |
| (d) | ಕಿರ್ಗಿಜ್‌ರು | (iv) | ಕಲಹರಿ ಮರುಭೂಮಿ |

ಸಂಕೇತಗಳು :

(1) (a) – (iii) (b) – (i) (c) – (ii) (d) – (iv)
(2) (a) – (ii) (b) – (i) (c) – (iv) (d) – (iii)
(3) (a) – (iv) (b) – (iii) (c) – (i) (d) – (ii)
(4) (a) – (ii) (b) – (iv) (c) – (iii) (d) – (i)

7. ಈ ಕೆಳಗಿನವುಗಳಲ್ಲಿ ತಪ್ಪಾಗಿ ಹೊಂದಾಣಿಕೆಯಾದ ಜೋಡಿ ಯಾವುದು ?

(1) ಐಸೋಹೈಟ್ಸ್ – ಸಮ ಪ್ರಮಾಣದ ಮಳೆ
(2) ಐಸೋಬಾರ್ – ಸಮ ನೀರಿನ ಲವಣಾಂಶ
(3) ಐಸೋಬಾತ್ಸ್ – ಸಮ ನೀರಿನ ಆಳ
(4) ಐಸೋಥರ್ಮ್ – ಸಮ ವಾಯುಮಂಡಲದ ಉಷ್ಣಾಂಶ

8. ಈ ಕೆಳಗಿನವುಗಳಲ್ಲಿ ತಪ್ಪಾದ ಜೋಡಿ/ಜೋಡಿಗಳನ್ನು ಗುರುತಿಸಿ.

a. ಅಣಶಿ – ಕೊಡಗು
b. ಕುದುರೆಮುಖ – ದಕ್ಷಿಣ ಕನ್ನಡ
c. ಮೂಕಾಂಬಿಕಾ – ಉಡುಪಿ
d. ಪುಷ್ಪಗಿರಿ – ಕೊಡಗು

(1) a, b ಮತ್ತು c
(2) a ಮಾತ್ರ
(3) c ಮತ್ತು d ಮಾತ್ರ
(4) a ಮತ್ತು b ಮಾತ್ರ

9. ಸೀಳು ಕಣಿವೆಯು ರಚನೆಯಾಗುವುದು

(1) ಸ್ತರ ಭಂಗಗಳಿಂದ
(2) ಸೀಳುಗಳಿಂದ
(3) ಸಂಕೋಚನದಿಂದ
(4) ಮಡಿಕೆಗಳಿಂದ

10. ಕೆಳಗಿನವರಲ್ಲಿ ಯಾರಿಗೆ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಪ್ರದಾನಿಸಲಾಗಿಲ್ಲ ?

(1) ನರ್ಗೀಸ್ ಮೊಹಮ್ಮದಿ
(2) ಮರಿಯಾ ಕೊರಿನಾ ಮಚಾಡೊ
(3) ಡೊನಾಲ್ಡ್ ಟ್ರಂಪ್
(4) ನಿಹೋನ್ ಹಿಡಾಂಕ್ಯೋ

11. ಈ ಕೆಳಕಂಡ ಯಾವ ಸ್ವಾತಂತ್ರ್ಯ ಹೋರಾಟಗಾರ್ತಿಯನ್ನು "ಕೈಮಗ್ಗದ ತಾಯಿ" ಎಂದು ಕರೆಯುತ್ತಾರೆ ?

(1) ಕಮಲಾದೇವಿ ಚಟ್ಟೋಪಾಧ್ಯಾಯ
(2) ಸರೋಜಿನಿ ನಾಯ್ಡು
(3) ಅರುಣಾ ಅಸಫ್ ಅಲಿ
(4) ಕಸ್ತೂರ್‌ಬಾ ಗಾಂಧಿ

ಕಚ್ಚಾ ಕಾರ್ಯಕ್ಕಾಗಿ ಸ್ಥಳ



[redacted]

12. 2011 ರ ಜನಗಣತಿಯ ಅಂಕಿ-ಅಂಶಗಳ ಆಧಾರದ ಮೇಲೆ ಕರ್ನಾಟಕದ ಶೇಕಡಾವಾರು ನಗರ ಜನಸಂಖ್ಯೆಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

(a) ಭಾರತದ ಸರಾಸರಿಗಿಂತ ಕಡಿಮೆ ಇದೆ.

(b) ತಮಿಳುನಾಡಿಗಿಂತ ಹೆಚ್ಚಿದೆ, ಆಂಧ್ರ ಪ್ರದೇಶಕ್ಕಿಂತ ಕಡಿಮೆ ಇದೆ.

(c) ಕೇರಳಕ್ಕಿಂತ ಕಡಿಮೆಯಿದೆ, ಆದರೆ ಆಂಧ್ರ ಪ್ರದೇಶಕ್ಕಿಂತ ಹೆಚ್ಚಾಗಿದೆ.

(d) ಭಾರತದ ಸರಾಸರಿಗಿಂತ ಹೆಚ್ಚಿದೆ, ಆದರೆ ತಮಿಳುನಾಡಿಗಿಂತ ಕಡಿಮೆ ಇದೆ.

ಸರಿಯಾದ ಹೇಳಿಕೆಗಳನ್ನು ಆರಿಸಿ :

(1) (c) ಮತ್ತು (d) ಸರಿಯಾಗಿವೆ.
(2) (a), (b) ಮತ್ತು (c) ಸರಿಯಾಗಿವೆ.
(3) (b), (c) ಮತ್ತು (d) ಸರಿಯಾಗಿವೆ.
(4) (a), (b) ಮತ್ತು (d) ಸರಿಯಾಗಿವೆ.

13. ಈ ಕೆಳಗಿನವುಗಳಲ್ಲಿ ಭಾರತದಲ್ಲಿ ಸ್ಥಾಪಿತವಾದ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಸರಿಯಾದ ಜೋಡಿಗಳನ್ನು ಗುರುತಿಸಿ.

(a) ಭಿಲಾಯಿ – ಸೋವಿಯತ್ ಯೂನಿಯನ್ ಸಹಯೋಗದೊಂದಿಗೆ

(b) ರೂರ್ಕೆಲಾ – ಜರ್ಮನಿ ಸಹಯೋಗದೊಂದಿಗೆ

(c) ಬೊಕಾರೋ – ಸೋವಿಯತ್ ಯೂನಿಯನ್ ಸಹಯೋಗದೊಂದಿಗೆ

(d) TISCO – ಬ್ರಿಟನ್ ಸಹಯೋಗದೊಂದಿಗೆ

(1) (b), (c) ಮತ್ತು (d) ಸರಿಯಾಗಿವೆ.
(2) (a), (b), (c) ಮತ್ತು (d) ಸರಿಯಾಗಿವೆ.
(3) (a), (b) ಮತ್ತು (d) ಸರಿಯಾಗಿವೆ.
(4) (a), (b) ಮತ್ತು (c) ಸರಿಯಾಗಿವೆ.

14. ಈ ಕೆಳಗಿನ ಕರ್ನಾಟಕ ನಕ್ಷೆಯಲ್ಲಿ ಗುರುತಿಸಲಾದ ಪ್ರದೇಶಗಳನ್ನು ಗುರುತಿಸಿ.




(1) (a) ತೀವ್ರ ಕೇಂದ್ರ ಬರಗಾಲ ಪ್ರದೇಶ (b) ಶರಾವತಿ ಜಲಾನಯನ ಪ್ರದೇಶ (c) ವರ್ಜೀನಿಯಾ ತಂಬಾಕು ಬೆಳೆಯುವ ಪ್ರದೇಶ (d) ಕಾಫಿ ಬೆಳೆಯುವ ಪ್ರದೇಶ

(2) (a) ಕಾಫಿ ಬೆಳೆಯುವ ಪ್ರದೇಶ (b) ವರ್ಜೀನಿಯಾ ತಂಬಾಕು ಬೆಳೆಯುವ ಪ್ರದೇಶ (c) ಶರಾವತಿ ಜಲಾನಯನ ಪ್ರದೇಶ (d) ತೀವ್ರ ಕೇಂದ್ರ ಬರಗಾಲ ಪ್ರದೇಶ

(3) (a) ತೀವ್ರ ಕೇಂದ್ರ ಬರಗಾಲ ಪ್ರದೇಶ (b) ವರ್ಜೀನಿಯಾ ತಂಬಾಕು ಬೆಳೆಯುವ ಪ್ರದೇಶ (c) ಶರಾವತಿ ಜಲಾನಯನ ಪ್ರದೇಶ (d) ಕಾಫಿ ಬೆಳೆಯುವ ಪ್ರದೇಶ

(4) (a) ಕಾಫಿ ಬೆಳೆಯುವ ಪ್ರದೇಶ (b) ಶರಾವತಿ ಜಲಾನಯನ ಪ್ರದೇಶ (c) ವರ್ಜೀನಿಯಾ ತಂಬಾಕು ಬೆಳೆಯುವ ಪ್ರದೇಶ (d) ತೀವ್ರ ಕೇಂದ್ರ ಬರಗಾಲ ಪ್ರದೇಶ

15. 'ಹಿಮಗಟ್ಟಿಸುವಿಕೆ (ಘನೀಕರಣದ) ಮೂಲಕ ಬೇರ್ಪಡಿಸುವ' ತಂತ್ರಜ್ಞಾನವನ್ನು ಇದಕ್ಕೆ ಬಳಸಲಾಗುತ್ತದೆ.

(1) ಸಾಗರಗಳ ನಿಕ್ಷೇಪಗಳನ್ನು ವರ್ಗೀಕರಿಸಲು
(2) ಸಾಗರಗಳಿಂದ ತ್ಯಾಜ್ಯಗಳನ್ನು ಶುಚಿಗೊಳಿಸಲು
(3) ಸಾಗರದ ನೀರನ್ನು ಲವಣಮುಕ್ತಗೊಳಿಸಲು
(4) ಸಾಗರಗಳ ಸೂಕ್ಷ್ಮಾಣು ಜೀವಿಗಳನ್ನು ವರ್ಗೀಕರಿಸಲು

ಕಚ್ಚಾ ಕಾರ್ಯಕ್ಕಾಗಿ ಸ್ಥಳ

16. ಪಟ್ಟಿ – I ನ್ನು ಪಟ್ಟಿ – II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ – I (ಭಾಷಾ ಕುಟುಂಬ) | | ಪಟ್ಟಿ – II (ಭಾಷೆಗಳು) | |
|---|---|---|---|
| (a) | ಇಂಡೋ – ಆರ್ಯನ್ ಭಾಷೆಗಳು | (i) | ತಮಿಳು |
| (b) | ದ್ರಾವಿಡ ಕುಟುಂಬ | (ii) | ಲಡಾಖೀ |
| (c) | ಆಸ್ಟ್ರಿಕ್ ಕುಟುಂಬ | (iii) | ಖಾಸೀ |
| (d) | ಸೈನೋ – ಟಿಬೇಟಿಯನ್ ಕುಟುಂಬ | (iv) | ಹಿಂದಿ |

(1) (a) – (iv) (b) – (i) (c) – (ii) (d) – (iii)
(2) (a) – (iii) (b) – (iv) (c) – (i) (d) – (ii)
(3) (a) – (ii) (b) – (i) (c) – (iv) (d) – (iii)
(4) (a) – (iv) (b) – (i) (c) – (iii) (d) – (ii)

17. ಭಾರತದ ಮಹಾ ಮೈದಾನದ ಗುಣಲಕ್ಷಣಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವುದು ಸರಿಯಾಗಿ ಹೊಂದಾಣಿಕೆಯಾಗಿಲ್ಲ ?

(1) ಭಾಂಗರ್ – ಹಳೆಯ ರೇವೆ (ಮೆಕ್ಕಲು) ಮಣ್ಣು
(2) ಭಾಬರ್ – ಜಲ್ಲಿಕಲ್ಲು ಮಿಶ್ರಿತ ಮರಳು ಮಣ್ಣು
(3) ಖಾದರ್ – ಹೊಸ ರೇವೆ (ಮೆಕ್ಕಲು) ಮಣ್ಣು
(4) ತೆರಾಯಿ – ಜೌಗು ಪ್ರದೇಶ

18. ಈ ಕೆಳಗಿನ ಭಾರತ ಸಂವಿಧಾನದ ಯಾವ ವಿಧಿಯು ಅಂತರ ರಾಜ್ಯ ವ್ಯಾಪಾರದ ಸಂದರ್ಭದಲ್ಲಿ ಸರಕು ಮತ್ತು ಸೇವೆಗಳ ತೆರಿಗೆಯನ್ನು (GST) ವಿಧಿಸುವುದು, ಸಂಗ್ರಹಿಸುವುದು ಮತ್ತು ಹಂಚುವುದನ್ನು ವ್ಯಾಖ್ಯಾನಿಸುತ್ತದೆ ?

(1) ವಿಧಿ 269A
(2) ವಿಧಿ 267A
(3) ವಿಧಿ 270A
(4) ವಿಧಿ 268A

19. ಪಟ್ಟಿ – I ಅನ್ನು ಪಟ್ಟಿ – II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ – I (ಅಸೆಂಬ್ಲಿ ಹೆಸರು) | | ಪಟ್ಟಿ – II (ದೇಶಗಳು) | |
|---|---|---|---|
| (a) | ಪಾರ್ಲಿಮೆಂಟ್ | (i) | ಜಪಾನ್ |
| (b) | ಕಾಂಗ್ರೆಸ್ | (ii) | ಭಾರತ |
| (c) | ಡಯಟ್ | (iii) | ರಷ್ಯಾ |
| (d) | ಫೆಡರಲ್ ಅಸೆಂಬ್ಲಿ | (iv) | ಯು.ಎಸ್.ಎ., |

(1) (a) – (ii) (b) – (iii) (c) – (i) (d) – (iv)
(2) (a) – (iv) (b) – (i) (c) – (iii) (d) – (ii)
(3) (a) – (ii) (b) – (iv) (c) – (i) (d) – (iii)
(4) (a) – (ii) (b) – (i) (c) – (iv) (d) – (iii)

20. ಭಾರತದಲ್ಲಿನ ಕಲ್ಲಿದ್ದಲಿನ ನಿಕ್ಷೇಪಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ (I) : ಭಾರತದ ಶೇ. 75 ರಷ್ಟು ಕಲ್ಲಿದ್ದಲಿನ ನಿಕ್ಷೇಪಗಳು ದಾಮೋದರ, ಇಬ್ ಮತ್ತು ಸುವರ್ಣರೇಖಾ ನದಿ ಕಣಿವೆಯಲ್ಲಿದೆ.

ಹೇಳಿಕೆ (II) : ಭಾರತದ ಖನಿಜಗಳ ಗುಣಮಟ್ಟ ಮತ್ತು ಗಣಿಗಾರಿಕೆಯ ವಿಶ್ಲೇಷಣೆಯನ್ನು ಭಾರತೀಯ ಭೂಗರ್ಭ ಸರ್ವೇಕ್ಷಣಾ ಸಂಸ್ಥೆ (GSI) ನಿರ್ವಹಿಸುತ್ತದೆ.

ಸರಿಯಾದ ಉತ್ತರವನ್ನು ಆರಿಸಿ.

(1) ಹೇಳಿಕೆ (I) ತಪ್ಪಾಗಿದೆ ಆದರೆ (II) ಸರಿಯಾಗಿದೆ.
(2) ಹೇಳಿಕೆ (I) ಸರಿಯಾಗಿದೆ ಆದರೆ (II) ತಪ್ಪಾಗಿದೆ.
(3) ಹೇಳಿಕೆ (I) ಮತ್ತು (II) ಎರಡೂ ತಪ್ಪಾಗಿವೆ.
(4) ಹೇಳಿಕೆ (I) ಮತ್ತು (II) ಎರಡೂ ಸರಿಯಾಗಿವೆ.

21. ಈ ಕೆಳಗಿನ ಯಾವ ದೇಶವು G7 ಸದಸ್ಯ ರಾಷ್ಟ್ರವಲ್ಲ ?

(1) ಭಾರತ
(2) ಫ್ರಾನ್ಸ್
(3) ಇಟಲಿ
(4) ಜರ್ಮನಿ

ಕಚ್ಚಾ ಕಾರ್ಯಕ್ಕಾಗಿ ಸ್ಥಳ

22. "ಪಕ್ಷಾಂತರ ನಿಷೇಧ ಕಾಯಿದೆ"ಗೆ ಸಂಬಂಧಿಸಿದಂತೆ ಭಾರತದ ಸಂವಿಧಾನದ ಕೆಳಗಿನ ಯಾವ ಅನುಸೂಚಿಯು ಅವಕಾಶವನ್ನು ನೀಡಿದೆ ?
(1) 10ನೇ ಅನುಸೂಚಿ (2) 9ನೇ ಅನುಸೂಚಿ (3) 8ನೇ ಅನುಸೂಚಿ (4) 7ನೇ ಅನುಸೂಚಿ

23. ರಾಜ್ಯದ ಅಡ್ವೋಕೇಟ್ ಜನರಲ್‌ರವರಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
(a) ಅವರು ರಾಜ್ಯಪಾಲರಿಂದ ನೇಮಕ ಹೊಂದುತ್ತಾರೆ.
(b) ಅವರು 5 ವರ್ಷಗಳ ಅವಧಿಗೆ ನೇಮಕಗೊಳ್ಳುತ್ತಾರೆ.
(c) ಅವರು ರಾಜ್ಯ ಸರ್ಕಾರದ ಅತ್ಯುನ್ನತ ಕಾನೂನು ಅಧಿಕಾರಿ ಆಗಿರುತ್ತಾರೆ.
(d) ಅವರು ರಾಜ್ಯ ಶಾಸಕಾಂಗದ ಉಭಯ ಸದನಗಳಲ್ಲಿ ಮಾತನಾಡುವ ಮತ್ತು ಭಾಗವಹಿಸುವ ಹಕ್ಕನ್ನು ಹೊಂದಿರುತ್ತಾರೆ.
ಮೇಲಿನ ಯಾವ ಹೇಳಿಕೆ/ಗಳು ತಪ್ಪಾಗಿವೆ ?
(1) (c) ಮತ್ತು (d) (2) (a) ಮತ್ತು (b) (3) (d) ಮಾತ್ರ (4) (b) ಮಾತ್ರ

24. ರಾಜ್ಯಪಾಲರು ಜಿಲ್ಲಾ ನ್ಯಾಯಾಧೀಶರನ್ನು ಯಾರೊಂದಿಗೆ ಸಮಾಲೋಚಿಸಿ ನೇಮಕ ಮಾಡುತ್ತಾರೆ ?
(1) ಮುಖ್ಯಮಂತ್ರಿ (2) ಹೈಕೋರ್ಟ್
(3) ಅಡ್ವೋಕೇಟ್ ಜನರಲ್ (4) ರಾಜ್ಯ ಲೋಕ ಸೇವಾ ಆಯೋಗ

25. ಸಂವಿಧಾನದ ವಿಧಿ-1 ರ ಅಡಿಯಲ್ಲಿ ಭಾರತದ ಭೂ ಪ್ರದೇಶಗಳು ಒಳಗೊಂಡಿರುವುದು.
(1) ಭಾರತ ಸರ್ಕಾರವು ಯಾವುದೇ ಸಮಯದಲ್ಲಿ ಸ್ವಾಧೀನಪಡಿಸಿಕೊಳ್ಳಬಹುದಾದ ಭೂಪ್ರದೇಶಗಳು ಮಾತ್ರ
(2) ರಾಜ್ಯಗಳ ಭೂಪ್ರದೇಶಗಳು ಮಾತ್ರ
(3) ರಾಜ್ಯಗಳ ಭೂಪ್ರದೇಶಗಳು, ಕೇಂದ್ರಾಡಳಿತ ಪ್ರದೇಶಗಳು, ಭಾರತ ಸರ್ಕಾರವು ಯಾವುದೇ ಸಮಯದಲ್ಲಿ ಸ್ವಾಧೀನಪಡಿಸಿಕೊಳ್ಳಬಹುದಾದ ಭೂಪ್ರದೇಶಗಳು
(4) ಕೇಂದ್ರಾಡಳಿತ ಪ್ರದೇಶಗಳು ಮಾತ್ರ

26. ಇವುಗಳಲ್ಲಿ ಯಾವುದರಲ್ಲಿ ಸಂಸತ್ತಿನಲ್ಲಿನ ಸಚೇತಕಗಳ (Whip) ಕಛೇರಿಯನ್ನು ಉಲ್ಲೇಖಿಸಲಾಗಿದೆ ?
(1) ಸಂಪ್ರದಾಯಗಳನ್ನು ಆಧರಿಸಿದೆ (2) ಸಂವಿಧಾನ
(3) ಪಕ್ಷದ ಪ್ರಣಾಳಿಕೆಗಳು (4) ಸದನದ ನಿಯಮಗಳು

27. ಭಾರತ ಸಂವಿಧಾನದ ಈ ಕೆಳಗಿನ ಯಾವ ವಿಧಿಯು ಮಂತ್ರಿಗಳು ವೈಯಕ್ತಿಕವಾಗಿ ರಾಷ್ಟ್ರಪತಿಗೆ ಜವಾಬ್ದಾರರಾಗಿರುತ್ತಾರೆಂದು ವಿವರಿಸಿದೆ ?
(1) ವಿಧಿ 74(2) (2) ವಿಧಿ 74(1) (3) ವಿಧಿ 75(2) (4) ವಿಧಿ 75(1)

28. ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿಲ್ಲ ?
(a) ರಾಜ್ಯಪಾಲರು ಮಸೂದೆಗೆ ಒಪ್ಪಿಗೆಯನ್ನು ನೀಡಬಹುದು.
(b) ಹಣಕಾಸಿನ ಮಸೂದೆಗೆ ತಮ್ಮ ಒಪ್ಪಿಗೆಯನ್ನು ರಾಜ್ಯಪಾಲರು ತಡೆಹಿಡಿಯಬಹುದು.
(c) ರಾಜ್ಯಪಾಲರು ಮಸೂದೆಯನ್ನು ರಾಷ್ಟ್ರಪತಿಗಳ ಮರುಪರಿಶೀಲನೆಗೆ ಕಾಯ್ದಿರಿಸಬಹುದು.
(d) ರಾಜ್ಯಪಾಲರು ಮಸೂದೆಗೆ ತಮ್ಮ ಅನುಮೋದನೆಯನ್ನು ತಡೆಹಿಡಿಯಬಹುದು.
(1) (c) ಮತ್ತು (d) ಮಾತ್ರ (2) (b) ಮಾತ್ರ (3) (b) ಮತ್ತು (d) ಮಾತ್ರ (4) (a) ಮತ್ತು (b) ಮಾತ್ರ

---

ಕಚ್ಚಾ ಕಾರ್ಯಕ್ಕಾಗಿ ಸ್ಥಳ

29. ಭಾರತ ಸಂವಿಧಾನಕ್ಕೆ ಸೇರಿಸಲಾದ ವಿವಿಧ ಭಾಗಗಳಿಗೆ ಸಂಬಂಧಿಸಿದಂತೆ, ಈ ಕೆಳಗಿನವುಗಳಲ್ಲಿ ಯಾವುದು/ಯಾವುವು ಸರಿಯಾಗಿ ಹೊಂದಿಕೆಯಾಗುತ್ತದೆ/ವೆ ?

(a) ಸಂಸದೀಯ ವ್ಯವಸ್ಥೆ – ಯುನೈಟೆಡ್ ಕಿಂಗ್‌ಡಮ್ (b) ತುರ್ತು ಪರಿಸ್ಥಿತಿಗಳು – ಜರ್ಮನಿ

(c) ತಿದ್ದುಪಡಿ ಪ್ರಕ್ರಿಯೆ – ದಕ್ಷಿಣ ಆಫ್ರಿಕಾ (d) ಮೂಲಭೂತ ಹಕ್ಕುಗಳು – ಐರ್‌ಲ್ಯಾಂಡ್

(1) (a) ಮತ್ತು (b) (2) (a), (b) ಮತ್ತು (c) (3) (a) ಮಾತ್ರ (4) (a) ಮತ್ತು (c)

30. ಭಾರತದ ಸಾಗರೋತ್ತರ ಪೌರತ್ವ (OCI) ಕಾರ್ಡ್ ಹೊಂದಿದವರಿಗೆ ಸಂಬಂಧಿಸಿದಂತೆ ತಪ್ಪಾದ ಹೇಳಿಕೆಯನ್ನು ಗುರುತಿಸಿ.

(1) ಬಾಂಗ್ಲಾದೇಶ ಮತ್ತು ಪಾಕಿಸ್ತಾನದ ಪೌರರು ಭಾರತದ ಸಾಗರೋತ್ತರ ಪೌರತ್ವ ಅರ್ಜಿ ಸಲ್ಲಿಸಲು ಅನರ್ಹರಾಗಿರುತ್ತಾರೆ.

(2) ಅವರಿಗೆ ಜೀವನ ಪರ್ಯಂತ ವೀಸಾ ನೀಡಲಾಗುತ್ತದೆ.

(3) OCI ಕಾರ್ಡ್ ಹೊಂದಿದವರು 15 ವರ್ಷಗಳ ಕಾಲ ವೀಸಾ ಮುಕ್ತವಾಗಿ ಭಾರತ ಪ್ರವೇಶಿಸಬಹುದು.

(4) OCI ಕಾರ್ಡ್ ಅನ್ನು ವಿವಾಹದ ನಂತರ ತಮ್ಮ ಭಾರತದ ನಾಗರಿಕ ಸಂಗಾತಿಯಿಂದ ಪಡೆದಿದ್ದು, ಕೋರ್ಟ್‌ನಿಂದ ವಿವಾಹ ರದ್ಧತಿಯಾದರೆ, ಅದನ್ನು ರದ್ದುಗೊಳಿಸಲಾಗುತ್ತದೆ.

31. ಈ ಕೆಳಗಿನವುಗಳಲ್ಲಿ ಭಾರತ ಸಂವಿಧಾನದ ಯಾವ ಭಾಗವು ಗಾಂಧೀವಾದಿ ಆದರ್ಶಗಳನ್ನು ಬಿಂಬಿಸುತ್ತದೆ ?

(1) ಭಾಗ III (2) ಭಾಗ I (3) ಭಾಗ IV (4) ಭಾಗ II

32. ಕರ್ನಾಟಕದ ವಸತಿ ಯೋಜನೆಗಳಲ್ಲಿ ಉಪಯೋಗಿಸುವ ಮೊಬೈಲ್ ಆ್ಯಪ್‌ನ ಹೆಸರು

(1) ಆಶ್ರಯ ವಿಜಿಲ್ (2) ವಸತಿ ವಿಜಿಲ್ (3) ಗೃಹ ವಿಜಿಲ್ (4) ಸ್ಪಂದನ ವಿಜಿಲ್

33. "ಕೂಸಿನ ಮನೆ" ಶಿಶುಪಾಲನಾ ಕೇಂದ್ರಗಳು ಯಾವ ಯೋಜನೆ ಅಡಿಯಲ್ಲಿ ಸ್ಥಾಪಿತವಾದವು ?

(1) PMGSY (2) MMGRAY (3) MGNREGA (4) SBMG

34. ವಿಜಯನಗರ ಅವಧಿಯ ಕೆಳಗಿನ ಯಾವ ಕೃತಿ ಕನ್ನಡ ಭಾಷೆಯಲ್ಲಿ ರಚಿತವಾಗಿದೆ ?

(1) ಮಧುರಾ ವಿಜಯಂ (2) ಕಲಾಪೂರ್ಣೋದಯಂ (3) ಆಮುಕ್ತಮಾಲ್ಯದ (4) ಪ್ರಭುಲಿಂಗ ಲೀಲೆ

35. ದೆಹಲಿಯಲ್ಲಿ "ದೀನ್ ಪನ್ಹಾ" ಎಂಬ ನಗರವನ್ನು ನಿರ್ಮಿಸಿದ ಮೊಘಲ್ ದೊರೆ ಯಾರು ?

(1) ಅಕ್ಬರ್ (2) ಬಾಬರ್ (3) ಜಹಾಂಗೀರ್ (4) ಹುಮಾಯೂನ್

36. 1656 ರಲ್ಲಿ ಶಿವಾಜಿ ಯಾರಿಂದ ಜೊವಳಿ ಪ್ರದೇಶವನ್ನು ಗೆದ್ದು, ಮಾವಲದ ಎತ್ತರ ಪ್ರದೇಶಗಳಿಗೆ ಅಧಿಪತಿಯಾದರು ?

(1) ಗಂಗಾ ಭಟ್ (2) ಚಂದ್ರ ರಾವ್ ಮೋರೆ (3) ಸರ್ಜಾ ಖಾನ್ (4) ಆದಿಲ್ ಷಾ

37. ಬಿದನೂರು ದೊರೆ ಶಿವಪ್ಪ ನಾಯಕರ ಪ್ರಸಿದ್ಧ ಕಂದಾಯ ಪದ್ಧತಿಯನ್ನು ಹೀಗೆ ಕರೆಯುತ್ತಿದ್ದರು

(1) ಪೊಗದಿ (2) ಕಂದಾಯ (3) ಕಪ್ಪ (4) ಶಿಸ್ತು

38. ಈ ಕೆಳಗಿನ ರಾಷ್ಟ್ರಪತಿಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ.

(a) ಪ್ರಣಬ್ ಮುಖರ್ಜಿ (b) ರಾಮ್ ನಾಥ್ ಕೋವಿಂದ್

(c) ಡಾ. ಎ.ಪಿ.ಜೆ. ಅಬ್ದುಲ್ ಕಲಾಂ (d) ಪ್ರತಿಭಾ ಪಾಟೀಲ್

(1) (a), (c), (d), (b) (2) (c), (d), (a), (b) (3) (c), (a), (b), (d) (4) (a), (b), (c), (d)

39. ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಮೊದಲ ಬಾರಿಗೆ ದ್ವಿಸದನ ಪದ್ಧತಿಯನ್ನು ಪರಿಚಯಿಸಿದ್ದು ಯಾವುದರ ಮೂಲಕ ?

(1) ಭಾರತ ಸರ್ಕಾರದ ಕಾಯ್ದೆ, 1919 (2) ಭಾರತ ಕೌನ್ಸಿಲ್ ಕಾಯ್ದೆ, 1861

(3) ಭಾರತ ಸರ್ಕಾರದ ಕಾಯ್ದೆ, 1935 (4) ಭಾರತ ಕೌನ್ಸಿಲ್ ಕಾಯ್ದೆ, 1909

---

ಕಚ್ಚಾ ಕಾರ್ಯಕ್ಕಾಗಿ ಸ್ಥಳ

40. ಈ ಕೆಳಗಿನವುಗಳಲ್ಲಿ ಯಾವ ಕೃತಿ ಪ್ಲೇಟೋನಿಂದ ರಚನೆಗೊಂಡಿಲ್ಲ ?

(1) ಡಯಲಾಗ್ಸ್ (2) ದ ಪಾಲಿಟಿಕ್ಸ್ (3) ದ ಲಾಸ್ (Laws) (4) ದ ರಿಪಬ್ಲಿಕ್

41. "ತುಳುಗಮ" ವ್ಯವಸ್ಥೆ ಎಂದರೆ

(1) ಬಾಬರನ ಭೂ ಕಂದಾಯ ವ್ಯವಸ್ಥೆ
(2) ಬಾಬರನ ವೈಜ್ಞಾನಿಕ ಯುದ್ಧ ತಂತ್ರ ವಿಧಾನ
(3) ಬಾಬರನ ಧಾರ್ಮಿಕ ವ್ಯವಸ್ಥೆ
(4) ಬಾಬರ್ ಪರಿಚಯಿಸಿದ ಆಡಳಿತ ವ್ಯವಸ್ಥೆ

42. ಯಾವ ಬೌದ್ಧ ಸಾಹಿತ್ಯವು ಹದಿನಾರು ಅಥವಾ ಷೋಡಶ ಮಹಾಜನಪದಗಳ ಬಗ್ಗೆ ಮಾಹಿತಿ ನೀಡುತ್ತದೆ ?

(1) ಅಂಗುತ್ತರ-ನಿಕಾಯ-
(2) ದಿಘಾ-ನಿಕಾಯ
(3) ಖುದ್ದಕ-ನಿಕಾಯ
(4) ತ್ರಿಪಿಟಕಗಳು

43. ಈ ಕೆಳಕಂಡ ಶಾತವಾಹನ ಅರಸರನ್ನು ಕಾಲಾನುಕ್ರಮದಲ್ಲಿ ಬರೆಯಿರಿ.

a. ಗೌತಮೀಪುತ್ರ ಶಾತಕರ್ಣಿ
b. ಶಾತಕರ್ಣಿ – I
c. ಯಜ್ಞಶ್ರೀ ಶಾತಕರ್ಣಿ
d. ವಶಿಷ್ಠಿಪುತ್ರ ಶ್ರೀ ಶಾತಕರ್ಣಿ

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.

(1) b, c, a, d
(2) b, a, d, c
(3) a, c, d, b
(4) a, b, c, d

44. ಗಂಗರ ದೊರೆ ದುರ್ವಿನೀತನು ಕನ್ನಡ ಲೇಖಕನೆಂದು ಯಾವ ಕೃತಿ ತಿಳಿಸಿದೆ ?

(1) ಕವಿರಾಜಮಾರ್ಗ
(2) ಗಜಾಷ್ಟಕ
(3) ಗಜಶಾಸ್ತ್ರ
(4) ಚಾವುಂಡರಾಯ ಪುರಾಣ

45. ಬ್ರಿಟೀಷ್ ಭಾರತದಲ್ಲಿ ಜಮೀನ್ದಾರರ ಕೈಲಿದ್ದ ಪೊಲೀಸ್ ಅಧಿಕಾರವನ್ನು ರದ್ದುಗೊಳಿಸಿ, ಪೊಲೀಸ್ ಆಡಳಿತಕ್ಕೆ ಹೊಸ ರೂಪವನ್ನು ನೀಡಿದವರು ಯಾರು ?

(1) ಲಾರ್ಡ್ ಕರ್ಜನ್
(2) ಲಾರ್ಡ್ ವಾರನ್ ಹೇಸ್ಟಿಂಗ್ಸ್
(3) ಲಾರ್ಡ್ ವೆಲ್ಲೆಸ್ಲಿ
(4) ಲಾರ್ಡ್ ಕಾರ್ನವಾಲೀಸ್

46. ಪಟ್ಟಿ – I ನ್ನು ಪಟ್ಟಿ – II ರ ಜೊತೆ ಹೊಂದಿಸಿ ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ – I | | ಪಟ್ಟಿ – II | |
|---|---|---|---|
| (a) | ಡಿ ಆಲ್ಮೆಡಾ | (i) | ಭಾರತಕ್ಕೆ ಜಲಮಾರ್ಗದ ಶೋಧನೆ |
| (b) | ಆಲ್ಬುಕರ್ಕ್ | (ii) | ಬಂಗಾಳದಲ್ಲಿ ದ್ವಿಸರ್ಕಾರ ಆಡಳಿತ ವ್ಯವಸ್ಥೆ |
| (c) | ವಾಸ್ಕೋಡಗಾಮಾ | (iii) | 1510 ರಲ್ಲಿ ಗೋವಾ ಮೇಲಿನ ಆಕ್ರಮಣ |
| (d) | ಬಾರ್ಥಲೋಮಿಯೊ ಡಯಾಜ್ | (iv) | ನೀಲಿ ನೀರಿನ ನೀತಿ |
| (e) | ರಾಬರ್ಟ್ ಕ್ಲೈವ್ | (v) | ಕೇಪ್ ಆಫ್ ಗುಡ್ ಹೋಪ್ ಶೋಧನೆ |

(1) (a) – (v) (b) – (iv) (c) – (ii) (d) – (iii) (e) – (i)
(2) (a) – (i) (b) – (ii) (c) – (iii) (d) – (iv) (e) – (v)
(3) (a) – (iv) (b) – (v) (c) – (iii) (d) – (i) (e) – (ii)
(4) (a) – (iv) (b) – (iii) (c) – (i) (d) – (v) (e) – (ii)

ಕಚ್ಚಾ ಕಾರ್ಯಕ್ಕಾಗಿ ಸ್ಥಳ

47. ಈ ಕೆಳಗಿನ ನಾಣ್ಯಗಳಲ್ಲಿ ಯಾವುದು ಸಮುದ್ರಗುಪ್ತನಿಗೆ ಸಂಬಂಧಿಸಿಲ್ಲ ?

(1) ಸಿಂಹ ಮಾದರಿ ನಾಣ್ಯ
(2) ಅಶ್ವಮೇಧ ಮಾದರಿ ನಾಣ್ಯ
(3) ಧನಸ್ಸು ಮಾದರಿ ನಾಣ್ಯ
(4) ವೀಣಾಪಾಣಿ ಮಾದರಿ ನಾಣ್ಯ

48. ಗಂಗರ ರಾಜಧಾನಿಗಳನ್ನು ಅವುಗಳ ಸರಿಯಾದ ಕಾಲಾನುಕ್ರಮದಲ್ಲಿ ಜೋಡಿಸಿ.

a. ತಲಕಾಡು  b. ಮಣ್ಣೆ  c. ಕೋಲಾರ

**ಸಂಕೇತಗಳು :**

(1) c, b, a
(2) a, b, c
(3) c, a, b
(4) a, c, b

49. ರಂಗಭೂಮಿಗೆ ಹೆಚ್ಚಿನ ಕೊಡುಗೆ ನೀಡಿ "ಭಾರತದ ಷೇಕ್ಸ್‌ಪಿಯರ್" ಎಂದು ಖ್ಯಾತರಾದವರು

(1) ಉತ್ಪಲ್ ದತ್
(2) ಶಂಭು ಮಿತ್ರ
(3) ಬಲರಾಜ್ ಸಾಹ್ನಿ
(4) ಆಘಾ ಹಶರ್ ಕಾಶ್ಮೀರಿ

50. ಹೂಗ್ಲಿ ಕದನದಿಂದ ಭಾರತದಲ್ಲಿ __________ ರ ಅಧಿಕಾರ ಅಂತ್ಯಗೊಂಡಿತು.

(1) ಫ್ರೆಂಚ್
(2) ಪೋರ್ಚುಗೀಸ್
(3) ಡಚ್
(4) ಇಂಗ್ಲೀಷ್

51. ಕೆಳಗಿನವರುಗಳಲ್ಲಿ ವೈಯಕ್ತಿಕ ಸತ್ಯಾಗ್ರಹಿ/ಸತ್ಯಾಗ್ರಹಿಗಳನ್ನು ಗುರುತಿಸಿ.

a. ಮಹಾದೇವ ದೇಸಾಯಿ  b. ಜವಾಹರಲಾಲ್ ನೆಹರು  c. ವಿನೋಬಾ ಭಾವೆ

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) c ಮಾತ್ರ
(2) a ಮತ್ತು c
(3) b ಮತ್ತು c
(4) b ಮಾತ್ರ

52. ಪಟ್ಟಿ – I ನ್ನು ಪಟ್ಟಿ – II ರ ಜೊತೆ ಹೊಂದಿಸಿ ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ – I<br>ಬೌದ್ಧ ಸಮ್ಮೇಳನಗಳು (ಮಹಾಸಭೆಗಳು) | ಪಟ್ಟಿ – II<br>(ತೀರ್ಮಾನಗಳು) |
|---|---|
| (a) ಮೊದಲನೇ ಬೌದ್ಧ ಮಹಾಸಭೆ | (i) ಬೌದ್ಧ ಧರ್ಮವು 2 ಪಂಥಗಳಾಗಿ ವಿಭಾಗಗೊಂಡಿತು |
| (b) ಎರಡನೇ ಬೌದ್ಧ ಮಹಾಸಭೆ | (ii) ಬುದ್ಧನ ತತ್ವಗಳಲ್ಲಿ ಏಕತೆ ತರಲು ಪ್ರಯತ್ನ |
| (c) ಮೂರನೇ ಬೌದ್ಧ ಮಹಾಸಭೆ | (iii) ಧಮ್ಮ ಸಂಗ್ರಹ |
| (d) ನಾಲ್ಕನೇ ಬೌದ್ಧ ಮಹಾಸಭೆ | (iv) 10 ಅಂಶಗಳ ತಿದ್ದುಪಡಿ |

(1) (a) – (iii) (b) – (iv) (c) – (ii) (d) – (i)
(2) (a) – (iv) (b) – (iii) (c) – (i) (d) – (ii)
(3) (a) – (iii) (b) – (iv) (c) – (i) (d) – (ii)
(4) (a) – (iv) (b) – (iii) (c) – (ii) (d) – (i)

53. ಈ ಕೆಳಗಿನವುಗಳಲ್ಲಿ ಎಷ್ಟು ಜೋಡಿ/ಜೋಡಿಗಳು ಸರಿಯಾಗಿ ಹೊಂದಾಣಿಕೆ ಆಗಿದೆ/ಆಗಿವೆ ?

| ಪಟ್ಟಿ – I<br>(ವೈದಿಕ ಹೆಸರು) | | ಪಟ್ಟಿ – II<br>(ಧಾನ್ಯಗಳು) |
|---|---|---|
| (a) ಯವ | – | ಬಾರ್ಲಿ |
| (b) ವ್ರೀಹಿ | – | ಭತ್ತ |
| (c) ಗೋಧುಮ | – | ಗೋಧಿ |
| (d) ತಿಲ | – | ಎಳ್ಳು |

(1) ಮೂರು ಮಾತ್ರ
(2) ಒಂದು ಮಾತ್ರ
(3) ಎಲ್ಲಾ ನಾಲ್ಕು
(4) ಎರಡು ಮಾತ್ರ

ಕಚ್ಚಾ ಕಾರ್ಯಕ್ಕಾಗಿ ಸ್ಥಳ

54. ಮೊದಲ ಮಲ್ಲಕಂಬ ವಿಶ್ವ ಚಾಂಪಿಯನ್ ಶಿಪ್ ಯಾವಾಗ ಮತ್ತು ಎಲ್ಲಿ ನಡೆಯಿತು ?

(1) 2020, ಬೆಂಗಳೂರು (2) 2016, ಕೊಲ್ಕತ್ತಾ (3) 2018, ಜೈಪುರ (4) 2019, ಮುಂಬಯಿ

55. ಜನಪ್ರಿಯ ಕ್ರಿಕೆಟ್ ಆಟಗಾರರನ್ನು (ಪಟ್ಟಿ-I) ಅವರ ಅಡ್ಡಹೆಸರಿನೊಂದಿಗೆ (ಪಟ್ಟಿ-II) ಹೊಂದಿಸಿ.

| ಪಟ್ಟಿ – I (ಆಟಗಾರರು) | | ಪಟ್ಟಿ – II (ಅಡ್ಡಹೆಸರು) | |
|---|---|---|---|
| (a) | ರಾಹುಲ್ ದ್ರಾವಿಡ್ | (i) | ಚಿಕು |
| (b) | ಶಿಖರ್ ಧವನ್ | (ii) | ಹಿಟ್ ಮ್ಯಾನ್ |
| (c) | ವಿರಾಟ್ ಕೊಹ್ಲಿ | (iii) | ಗಬ್ಬರ್ |
| (d) | ರೋಹಿತ್ ಶರ್ಮ | (iv) | ದ ವಾಲ್ |

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.

(1) (a) – (iii) (b) – (ii) (c) – (iv) (d) – (i)
(2) (a) – (ii) (b) – (i) (c) – (iii) (d) – (iv)
(3) (a) – (iv) (b) – (iii) (c) – (i) (d) – (ii)
(4) (a) – (i) (b) – (iv) (c) – (ii) (d) – (iii)

56. ಅಟಲ್ ಇನ್‌ಕ್ಯುಬೇಷನ್ ಸೆಂಟರ್‌ಗಳಿಗಾಗಿ (AICs) ಈ ಕೆಳಗಿನವುಗಳಲ್ಲಿ ಯಾವುದನ್ನು ವಲಯ-ನಿರ್ದಿಷ್ಟ ಗಮನದ ಕ್ಷೇತ್ರವೆಂದು ಗುರುತಿಸಿ ಪಟ್ಟಿ ಮಾಡಲಾಗಿಲ್ಲ ?

(1) ಪ್ರವಾಸೋದ್ಯಮ (2) ಸೈಬರ್ ಭದ್ರತೆ
(3) ಇಂಟರ್‌ನೆಟ್ ಆಫ್ ಥಿಂಗ್ಸ್ (IoT) (4) ಕೃಷಿ

57. ಕೆಳಕಂಡವುಗಳಲ್ಲಿ ಯಾವುದನ್ನು ಗಿಗ್ (gig) ಆರ್ಥಿಕತೆಯ ಭಾಗವಾಗಿ ಉಲ್ಲೇಖಿಸಲಾಗಿಲ್ಲ ?

(1) ರೈಡ್‌ಶೇರಿಂಗ್ (2) ವಾಣಿಜ್ಯ ಬ್ಯಾಂಕಿಂಗ್
(3) ವಿತರಣೆ ಸೇವೆಗಳು (4) ಸ್ವತಂತ್ರ ಉದ್ಯೋಗ

58. ಭಾರತದಲ್ಲಿ ಆಯ್ದ ಕೃಷಿ ಬೆಳೆಗಳಿಗೆ "ಕನಿಷ್ಠ ಬೆಂಬಲ ಬೆಲೆ" ಯನ್ನು ಶಿಫಾರಸು ಮಾಡುವವರು

(1) ಭಾರತ ಸರ್ಕಾರದ ಕೃಷಿ ಮಂತ್ರಾಲಯ (2) ಭಾರತೀಯ ಆಹಾರ ನಿಗಮ
(3) ಕೃಷಿ ವೆಚ್ಚ ಮತ್ತು ಬೆಲೆ ಆಯೋಗ (4) ಭಾರತೀಯ ರಿಸರ್ವ್ ಬ್ಯಾಂಕು

59. ಗಾಂಧೀಜಿಯ ಹರಿಜನ ಪತ್ರಿಕೆ ಕೆಳಗಿನ ಯಾವ ಪ್ರಕಾರಕ್ಕೆ ಸೇರಿದೆ ?

(1) ಪಾಕ್ಷಿಕ (2) ದಿನಪತ್ರಿಕೆ (3) ಮಾಸಿಕ (4) ವಾರಪತ್ರಿಕೆ

60. ಷಹನಾಮಕ್ಕೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

a. ಇದು ಒಂದು ಪರ್ಷಿಯನ್ ಮಹಾಕಾವ್ಯ.
b. ಫಿರ್ದೌಸಿ ಇದನ್ನು ರಚಿಸಿದ್ದಾರೆ.
c. ಇದು ಅರೇಬಿಕ್ ಭಾಷೆಯಲ್ಲಿದೆ.
d. ಇದರ ಅರ್ಥ 'ರಾಜರ ಪುಸ್ತಕ'.

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) b, c ಮತ್ತು d (2) a, b ಮತ್ತು d (3) a, b ಮತ್ತು c (4) a, c ಮತ್ತು d

ಕಚ್ಚಾ ಕಾರ್ಯಕ್ಕಾಗಿ ಸ್ಥಳ

61. ಬಾಯಿಯಲ್ಲಿರುವ ಬ್ಯಾಕ್ಟೀರಿಯಾಗಳು, ಊಟದ ನಂತರ ಸಕ್ಕರೆ ಮತ್ತು ಉಳಿದಿರುವ ಆಹಾರ ಪದಾರ್ಥಗಳನ್ನು ಆಮ್ಲವಾಗಿ ಪರಿವರ್ತಿಸುತ್ತದೆ. ಇದರಿಂದ ಹಲ್ಲಿನ ಹುಳುಕು ಉಂಟಾಗುತ್ತದೆ. ಇದನ್ನು ತಡೆಗಟ್ಟಲು ಬಳಸುವ ಟೂತ್‌ಪೇಸ್ಟ್‌ನ ಗುಣ ಸಾಮಾನ್ಯವಾಗಿ ಇದಾಗಿರುತ್ತದೆ.

(1) ತಟಸ್ಥ (2) ಆಮ್ಲೀಯ (3) ನಂಜುನಿವಾರಕ (4) ಪ್ರತ್ಯಾಮ್ಲೀಯ

62. ಓಝೋನ್ ಪದರದ ನಾಶವಾಗುವಿಕೆಗೆ ಕಾರಣವಾದ ಕ್ಲೋರೋಫ್ಲೋರೋ ಮಿಥೇನ್ ಮತ್ತು ಕ್ಲೋರೋಫ್ಲೋರೋ ಈಥೇನ್‌ಗಳಿಗೆ ಬಳಸಲಾಗುವ ಸಾಮಾನ್ಯ ಹೆಸರು

(1) ಕ್ರೌನ್ ಈಥರ್ಸ್ (2) ಕ್ಲೋರೋಫಾರ್ಮ್ (3) ಸ್ಟೈರೇನ್ಸ್ (4) ಫ್ರೆಯಾನ್ಸ್

63. ಶ್ರವಣ ಸಾಧಕಗಳು ಮತ್ತು ಗಡಿಯಾರದಂಥ ಸಾಧನಗಳಲ್ಲಿ ಬಳಸಲಾಗುವ ಕೋಶಗಳು

(1) ಸೀಸ-ಧಾರಕ ಕೋಶ (2) ಒಣ ಕೋಶ
(3) ನಿಕ್ಕಲ್-ಕ್ಯಾಡ್ಮಿಯಂ ಕೋಶ (4) ಪಾದರಸದ ಕೋಶ

64. ಜೀರ್ಣಕ್ರಿಯೆ ವ್ಯವಸ್ಥೆಯ ಕಾಯಿಲೆಗಳಿಗೆ ಸಂಬಂಧಿಸಿದ ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ ಮತ್ತು ಅವುಗಳಲ್ಲಿ ಸರಿಯಾದ ಹೇಳಿಕೆಯನ್ನು ಆರಿಸಿ.

(1) ಅಜೀರ್ಣತೆಯು ಹಾರ್ಮೋನುಗಳ ಅಪರ್ಯಾಪ್ತ ಸ್ರಾವದ ಕಾರಣದಿಂದ ಉಂಟಾಗುತ್ತದೆ.
(2) ಕಾಮಾಲೆ ಕಾಯಿಲೆಯಾದಾಗ ಕರುಳು ಬಾಧಿತವಾಗುತ್ತದೆ. ಇದರಲ್ಲಿ ಪಿತ್ತವರ್ಣಕಗಳ (ಬೈಲ್ ಪಿಗ್ಮೆಂಟ್‌ಗಳ) ಶೇಖರಣೆಯಿಂದಾಗಿ ಚರ್ಮ ಮತ್ತು ಕಣ್ಣುಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ.
(3) ಪರಾವಲಂಬಿ ಜೀವಿಗಳಾದ ಪ್ಲಾಸ್ಮೋಡಿಯಂ ವೈವಾಕ್ಸ್‌ನಂತಹ ಜೀವಿಗಳು ಕರುಳಿನ ಒಳಗೋಡೆಗೆ ಹಾನಿಯುಂಟು ಮಾಡುತ್ತವೆ.
(4) ಆಮಶಂಕೆಯು ಅಸಹಜ ಮಲವಿಸರ್ಜನೆ (ಕರುಳಿನ ಅಪಸಾಮಾನ್ಯ ಕ್ರಿಯೆ) ಕಾರಣದಿಂದ ಉಂಟಾಗುತ್ತದೆ.

65. ತಂಬಾಕು ಗಿಡದ ಬೇರುಗಳನ್ನು ಸೋಂಕು ಉಂಟು ಮಾಡುವ ದುಂಡು ಹುಳುಗಳಿಂದ (ನೆಮಟೋಡ್‌ಗಳಿಂದ) ಸಂರಕ್ಷಿಸುವ ವಿನೂತನ ಪ್ರಕ್ರಿಯೆಯು,

(1) ವಂಶವಾಹಿ ಚಿಕಿತ್ಸೆ (2) Bt. ಟಾಕ್ಸಿನ್ಸ್ ವಂಶವಾಹಿಗಳ ಸಂಘಟನೆ
(3) ಪಾಲಿಮರೇಸ್ ಸರಪಳಿ ಪ್ರತಿಕ್ರಿಯೆ (4) ಆರ್.ಎನ್.ಎ. ವ್ಯತೀಕರಣ

66. ಭಾರತದ ರಾಷ್ಟ್ರೀಯ ಅರಣ್ಯ ನೀತಿ (1988) ಯು ಬಯಲು ಹಾಗೂ ಗುಡ್ಡಗಾಡು ಪ್ರದೇಶಗಳಿಗೆ ಶಿಫಾರಸು ಮಾಡಿರುವ ಶೇಖಡಾವಾರು ಅರಣ್ಯ ಪ್ರದೇಶವು ಕ್ರಮವಾಗಿ

(1) 67% ಹಾಗೂ 30% (2) 19.4% ಹಾಗೂ 30% (3) 67% ಹಾಗೂ 33% (4) 33% ಹಾಗೂ 67%

67. ಈ ಕೆಳಗಿನವುಗಳಲ್ಲಿ ತಪ್ಪಾಗಿ ಹೊಂದಾಣಿಕೆಯಾಗಿರುವ ಜೋಡಿಯನ್ನು ಗುರುತಿಸಿ.

(1) ಡಾಗ್ ಫಿಶ್ – ಸಮುದ್ರ ನೀರು (2) ಸ್ಟಿಂಗ್ ರೇ – ಸಮುದ್ರ ನೀರು
(3) ಕಾಟ್ಲ – ಸಿಹಿ ನೀರು (4) ಫ್ಲೈಯಿಂಗ್ ಫಿಶ್ – ಸಿಹಿ ನೀರು

68. ಪಾತ್ರೆಯಲ್ಲಿ ಆಹಾರವನ್ನು ತಯಾರಿಸುವ ಸಂದರ್ಭದಲ್ಲಿ ಪಾತ್ರೆಯ ತಳಭಾಗವು ಕಪ್ಪಾಗುವುದು ಏನನ್ನು ಸೂಚಿಸುತ್ತದೆ ?

(1) ಆಹಾರವು ಸೀದುಹೋಗುವುದು (2) ಇಂಧನದ ಸಂಪೂರ್ಣ ದಹನಕ್ರಿಯೆ
(3) ಇಂಧನದ ಕೊರತೆ (4) ಇಂಧನದ ಅಪೂರ್ಣ ದಹನಕ್ರಿಯೆ

69. ಫ್ಲೆಕ್ಸ್ ಇಂಧನ ವಾಹನಗಳ (FFV) ಎಂಜಿನ್‌ನಲ್ಲಿ ಬಳಸಲಾಗುವ ಇಂಧನ

(1) 75% ಪೆಟ್ರೋಲ್ + 25% ಎಥನಾಲ್ (2) 80% ಪೆಟ್ರೋಲ್ + 20% ಎಥನಾಲ್
(3) ಪೆಟ್ರೋಲ್ + ಎಥನಾಲ್ ಯಾವುದೇ ಅನುಪಾತದಲ್ಲಿ (4) 60% ಪೆಟ್ರೋಲ್ + 40% ಎಥನಾಲ್

ಕಚ್ಚಾ ಕಾರ್ಯಕ್ಕಾಗಿ ಸ್ಥಳ

70. ಜೂನ್ 29, 2026 ಸೋಮವಾರ. ಹಾಗಾದರೆ ಜೂನ್ 29, 2030 ಯಾವ ವಾರ ?
(1) ಗುರುವಾರ (2) ಸೋಮವಾರ (3) ಶನಿವಾರ (4) ಭಾನುವಾರ

71. ಒಂದು ಕ್ರಿಕೆಟ್ ಪಂದ್ಯದಲ್ಲಿ, ಮೊದಲ 10 ಓವರ್‌ಗಳಲ್ಲಿ ರನ್ ರೇಟ್ 4.5 ಆಗಿದೆ. 325 ರನ್ನುಗಳ ಗುರಿಯನ್ನು ಉಳಿದ 40 ಓವರ್‌ಗಳಲ್ಲಿ ತಲುಪಲು ಬೇಕಾದ ರನ್ ರೇಟ್ ಎಷ್ಟು ?
(1) 8 (2) 7 (3) 4.5 (4) 6

72. $\sqrt{10} = 3.162$, ಆದರೆ, $\frac{1}{\sqrt{10}}$ ರ ಮೌಲ್ಯವು
(1) 0.3162 (2) 31.62 (3) 0.03162 (4) 3.162

73. ಸಕ್ಕರೆಯ ದರವನ್ನು 25% ಹೆಚ್ಚಿಸಲಾಗಿದೆ. ಒಂದು ಕುಟುಂಬವು ತನ್ನ ಖರ್ಚನ್ನು ಮೊದಲಿನಂತೆಯೇ ಉಳಿಸಿಕೊಳ್ಳಲು ಬಯಸಿದರೆ, ಆಗ ಕುಟುಂಬವು ಸಕ್ಕರೆ ಬಳಕೆಯನ್ನು ಎಷ್ಟು ಪ್ರತಿಶತ ಕಡಿಮೆ ಮಾಡಬೇಕು ?
(1) 80% (2) 25% (3) 75% (4) 20%

74. ಈ ಕೆಳಗಿನ ಪ್ರಶ್ನೆಯಲ್ಲಿ ಒಂದು ಅಕ್ಷರ ಸರಣಿಯನ್ನು ನೀಡಲಾಗಿದೆ. ಈ ಸರಣಿಯಲ್ಲಿ ಕೆಲವು ಅಕ್ಷರಗಳು ಕಾಣೆಯಾಗಿವೆ. ಸರಿಯಾದ ಉತ್ತರವನ್ನು ನೀಡಲಾದ ಆಯ್ಕೆಗಳಿಂದ ಗುರುತಿಸಿ.

abc _ abc _ da _ cd _ d
(1) bdbd (2) bbdd (3) dddb (4) ddbd

75. 4 + 0.44 + 4.4 + 0.04 + 44 = ?
(1) 48.08 (2) 44.88 (3) 52.08 (4) 52.88

76. ಕೆಳಗಿನ ಚಿತ್ರಗಳಲ್ಲಿ ಒಂದೇ ದಾಳದ ವಿವಿಧ ನಾಲ್ಕು ಸ್ಥಿತಿಗಳನ್ನು ತೋರಿಸಿದೆ. ಅದರಲ್ಲಿ ಸಂಖ್ಯೆ 4 ರ ವಿರುದ್ಧವಾಗಿರುವ ಸಂಖ್ಯೆಯನ್ನು ಕಂಡುಹಿಡಿಯಿರಿ.




(i) (ii) (iii) (iv)

(1) 2 (2) 6 (3) 1 (4) 5

77. ಈ ಕೆಳಕಂಡವುಗಳಲ್ಲಿ ತಪ್ಪಾಗಿರುವ ಹೇಳಿಕೆಯನ್ನು ಆರಿಸಿ.
(1) ತಾಯಿಯ ಅಂಡಾಣು ಮಗುವಿನ ಲಿಂಗವನ್ನು ನಿರ್ಣಯಿಸುತ್ತದೆ.
(2) ಉತ್ಪತ್ತಿಯಾಗುವ ಒಟ್ಟು ವೀರ್ಯಾಣುಗಳಲ್ಲಿ 50% ವೀರ್ಯಾಣುಗಳು, X - ವರ್ಣತಂತುಗಳನ್ನು ಮತ್ತು ಉಳಿದ 50% Y - ವರ್ಣತಂತುಗಳು ಹೊಂದಿರುತ್ತವೆ.
(3) ಮನುಷ್ಯರಲ್ಲಿರುವ 23 ಜೋಡಿ ವರ್ಣತಂತುಗಳಲ್ಲಿ, ಗಂಡು ಮತ್ತು ಹೆಣ್ಣು ಇಬ್ಬರಲ್ಲೂ 22 ಜೊತೆಗಳು ನಿಖರವಾಗಿ ಸಮಾನವಾಗಿರುತ್ತವೆ.
(4) ಸ್ತ್ರೀಯರು X - ವರ್ಣತಂತು ಇರುವ ಒಂದೇ ವಿಧದ ಅಂಡಾಣುವನ್ನು ಉತ್ಪಾದಿಸುತ್ತಾರೆ.

78. ಬಿಟ್ಟು ಹೋಗಿರುವ ಸಂಖ್ಯೆಯನ್ನು ಕಂಡು ಹಿಡಿಯಿರಿ.




(1) 26 (2) 18 (3) 32 (4) 12

ಕಚ್ಚಾ ಕಾರ್ಯಕ್ಕಾಗಿ ಸ್ಥಳ

79. 12 ಗಂಟೆಗಳ ಆವೃತ್ತಿಯಲ್ಲಿ, ಈಗ 7:00 ಗಂಟೆಯಾಗಿದ್ದರೆ, 54 ಗಂಟೆಗಳ ನಂತರ ಎಷ್ಟು ಗಂಟೆಯಾಗಿರುತ್ತದೆ ?
(1) 5:00 (2) 1:00 (3) 6:00 (4) 3:00

80. BY = 50 ಆದರೆ, GO + OD ಮತ್ತು GO – OD ಏನಾಗುತ್ತದೆ ?
(1) ಅನುಕ್ರಮವಾಗಿ 105 ಮತ್ತು 60
(2) ಅನುಕ್ರಮವಾಗಿ 165 ಮತ್ತು 45
(3) ಅನುಕ್ರಮವಾಗಿ 60 ಮತ್ತು 105
(4) ಅನುಕ್ರಮವಾಗಿ 45 ಮತ್ತು 165

81. ಒಂದು ಕೋಡಿಂಗ್ ಭಾಷೆಯಲ್ಲಿ
'123' ಅಂದರೆ 'Radha bright girl'
'145' ಅಂದರೆ 'Dark big girl'
'637' ಅಂದರೆ 'Ravi bright boy'
ಹಾಗಾದರೆ 'bright girl' ಎಂಬುದರ ಕೋಡಿಂಗ್
(1) 23 (2) 13 (3) 14 (4) 31

**ನಿರ್ದೇಶನ :** ಕೆಳಗೆ ನೀಡಿರುವ ವೆನ್ ಚಿತ್ರವನ್ನು ಪರಿಗಣಿಸಿ **82** ಮತ್ತು **83** ಪ್ರಶ್ನೆಗಳಿಗೆ ಉತ್ತರಿಸಿ.
ಒಂದು ತರಗತಿಯಲ್ಲಿ ವಿದ್ಯಾರ್ಥಿಗಳು ವೆನ್ ಚಿತ್ರದಲ್ಲಿ ತೋರಿಸಿರುವಂತೆ ಬೇರೆ ಬೇರೆ ವಿಷಯಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ.




82. ಎಷ್ಟು ಜನ ವಿದ್ಯಾರ್ಥಿಗಳು ಇತಿಹಾಸವನ್ನು ಆಯ್ಕೆ ಮಾಡಿಕೊಳ್ಳದೇ, ಅರ್ಥಶಾಸ್ತ್ರ ಮತ್ತು ಭೂಗೋಳಶಾಸ್ತ್ರವನ್ನು ಆರಿಸಿಕೊಂಡಿದ್ದಾರೆ ?
(1) 2 (2) 5 (3) 3 (4) 7

83. ಅರ್ಥಶಾಸ್ತ್ರವನ್ನು ಆಯ್ಕೆ ಮಾಡಿಕೊಳ್ಳದೇ, ಭೂಗೋಳಶಾಸ್ತ್ರವನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳ ಸಂಖ್ಯೆ
(1) 7 (2) 8 (3) 12 (4) 5

84. ಪಟ್ಟಿ-I ರಲ್ಲಿರುವ ವಿಷಯಗಳನ್ನು ಪಟ್ಟಿ-II ರಲ್ಲಿರುವ ವಿಷಯಗಳೊಂದಿಗೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ-I | ಪಟ್ಟಿ-II |
|---|---|
| (a) ವಿದ್ಯುದಾಯಸ್ಕಾಂತ | (i) ಕೋಬಾಲ್ಟ್ |
| (b) ಫ್ಯೂಸ್ | (ii) ಟಂಗ್‌ಸ್ಟನ್ |
| (c) ವಿದ್ಯುತ್ ಬಲ್ಬ್ | (iii) ಸೀಸ |
| (d) ಶಾಶ್ವತ ಆಯಸ್ಕಾಂತ | (iv) ಮೃದುವಾದ ಕಬ್ಬಿಣ |

(1) (a) – (iii), (b) – (ii), (c) – (i), (d) – (iv)
(2) (a) – (iv), (b) – (iii), (c) – (ii), (d) – (i)
(3) (a) – (iii), (b) – (ii), (c) – (iv), (d) – (i)
(4) (a) – (ii), (b) – (i), (c) – (iii), (d) – (iv)

85. ನಾಸಾ ಉಡಾಯನ ಮಾಡಿದ ಪ್ರಥಮ ದೂರವಾಣಿ ಮತ್ತು ದೂರದರ್ಶನ ಉಪಗ್ರಹ
(1) ಟಿ.ಐ.ಆರ್.ಓ.ಎಸ್. 1 (2) ಟೆಲ್ ಸ್ಟಾರ್ 1 (3) ಸ್ಪುಟ್ನಿಕ್ 1 (4) ಸಿಂಕಾಮ್ 3

86. ಈ ಕೆಳಗಿನವುಗಳಲ್ಲಿ ಯಾವುದು ನಕ್ಷತ್ರ ಪುಂಜ ಅಲ್ಲ ?
(1) ಓರಿಯನ್ (2) ಗ್ರೇಟ್ ಬೇರ್ (3) ಲಿಯೋ ಮೇಜರ್ (4) ಕ್ಯಾಲಿಸ್ಟೋ

ಕಚ್ಚಾ ಕಾರ್ಯಕ್ಕಾಗಿ ಸ್ಥಳ

87. ಎರಡು ಕಾಯಗಳ ನಡುವಿನ ಘರ್ಷಣಾ ಬಲದ ಪರಿಮಾಣ/ಮೌಲ್ಯವನ್ನು ಇಳಿಕೆಯ ಕ್ರಮದಲ್ಲಿ ಜೋಡಿಸಲಾಗಿದೆ. ಜೋಡಿಸಲಾಗಿರುವ ಸರಿಯಾದ ಉತ್ತರವನ್ನು ಆರಿಸಿ.

(1) ಸ್ಥಾಯಿ, ಜಾರುವಿಕೆ, ಉರುಳುವಿಕೆ
(2) ಉರುಳುವಿಕೆ, ಸ್ಥಾಯಿ, ಜಾರುವಿಕೆ
(3) ಉರುಳುವಿಕೆ, ಜಾರುವಿಕೆ, ಸ್ಥಾಯಿ
(4) ಜಾರುವಿಕೆ, ಸ್ಥಾಯಿ, ಉರುಳುವಿಕೆ

88. ಹೈಡ್ರಾಲಿಕ್ ಲಿಫ್ಟ್ ಈ ಕೆಳಗಿನ ಯಾವುದರ ಮೇಲೆ ಆಧಾರಿತವಾಗಿದೆ ?

(1) ಬರ್ನೌಲಿ ತತ್ವ
(2) ನ್ಯೂಟನ್ ನಿಯಮ
(3) ಸ್ಟೋಕ್ಸ್‌ನ ನಿಯಮ
(4) ಪಾಸ್ಕಲ್ ನಿಯಮ

89. ಮಿನಮಾಟಾ ಕಾಯಿಲೆ ಯಾವ ಕಾರಣದಿಂದ ಉಂಟಾಗುತ್ತದೆ ?

(1) ಸೀಸದ ವಿಷ
(2) ಕ್ಯಾಡ್ಮಿಯಂ ವಿಷ
(3) ಆರ್ಸೆನಿಕ್ ವಿಷ
(4) ಪಾದರಸದ ವಿಷ

90. ವಿಸ್ತರಿಸಿ – ಎನ್.ಇ.ಇ.ಆರ್.ಐ. (NEERI)

(1) ನ್ಯಾಚುರಲ್ ಎನ್ವಿರಾನ್‌ಮೆಂಟಲ್ ಇಕೊಸಿಸ್ಟಂ ರಿಸರ್ಚ್ ಇನ್ಸ್ಟಿಟ್ಯೂಟ್
(2) ನ್ಯಾಷನಲ್ ಎನ್ವಿರಾನ್‌ಮೆಂಟಲ್ ಇಂಜಿನಿಯರಿಂಗ್ ರಿಸರ್ಚ್ ಇನ್ಸ್ಟಿಟ್ಯೂಟ್
(3) ನ್ಯಾಷನಲ್ ಎನ್‌ಡೇಂಜರ್ಡ್ ಆ್ಯಂಡ್ ಎಂಡೆಮಿಕ್ ರಿಸರ್ಚ್ ಇನ್ಸ್ಟಿಟ್ಯೂಟ್
(4) ನ್ಯಾಷನಲ್ ಇಂಜಿನಿಯರಿಂಗ್ ಇಕಲಾಜಿಕಲ್ ರಿಸೋರ್ಸ್ ಇನ್ಸ್ಟಿಟ್ಯೂಟ್

91. ಜನರು ಹೇಗೆ ವರ್ತಿಸಬೇಕು ಎಂದು ಸೂಚಿಸುವ ಮಾದರಿ ನೈತಿಕ ಮಾನದಂಡಗಳು ಮತ್ತು ಮಾರ್ಗಸೂಚಿಗಳನ್ನು ಸ್ಥಾಪಿಸುವ ನೈತಿಕತೆಯ ಕ್ಷೇತ್ರ (Domain) ಅನ್ನು ಹೆಸರಿಸಿ.

(1) ಅಪ್ಲೈಡ್ ಎಥಿಕ್ಸ್
(2) ಮೆಟಾ ಎಥಿಕ್ಸ್
(3) ಪಾಸಿಟೀವ್ ಎಥಿಕ್ಸ್
(4) ನಾರ್ಮೇಟೀವ್ ಎಥಿಕ್ಸ್

92. ಈ ಕೆಳಗಿನವುಗಳಲ್ಲಿ ಯಾವುದು/ಯಾವುವು ಮಾದರಿ ನೀತಿ (ನಡವಳಿಕೆ) ಸಂಹಿತೆಯ ಪ್ರಮುಖ ತತ್ವವಲ್ಲ/ತತ್ವಗಳಲ್ಲ ?

(a) ಸಮಗ್ರತೆ ಮತ್ತು ಪ್ರಾಮಾಣಿಕತೆ
(b) ರಾಜಕೀಯ ತಟಸ್ಥತೆ
(c) ಸೌಜನ್ಯ ಮತ್ತು ಉತ್ತಮ ನಡವಳಿಕೆ
(d) ಸಾರ್ವಜನಿಕರಿಗೆ ಪ್ರತಿಕ್ರಿಯಿಸದಿರುವುದು

(1) (d) ಮಾತ್ರ
(2) (a) ಮತ್ತು (d)
(3) (b) ಮಾತ್ರ
(4) (b) ಮತ್ತು (d)

93. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ ಮತ್ತು ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.

**ಹೇಳಿಕೆ I** : ಒಂದು ವಸ್ತು ಮುಕ್ತವಾಗಿ ಪತನವಾಗುತ್ತಿರುವಾಗ ಯಾವುದೇ ಮೇಲ್ಮುಖ ಬಲ ಪ್ರಯೋಗವಾಗುವುದಿಲ್ಲ. ಒಂದು ವಸ್ತು ಮುಕ್ತವಾಗಿ ಪತನವಾಗುತ್ತಿರುವಾಗ ಯಾವುದೇ ಮೇಲ್ಮುಖ ಬಲ ಪ್ರಯೋಗವಾಗುವುದಿಲ್ಲ.

**ಹೇಳಿಕೆ II** : ಉಪಗ್ರಹದ ಒಳಗಿರುವ ವ್ಯಕ್ತಿ ತೂಕ ರಾಹಿತ್ಯತೆಯನ್ನು ಅನುಭವಿಸುತ್ತಾನೆ/ಳೆ.

(1) ಎರಡೂ ಹೇಳಿಕೆಗಳು ಸರಿ ಮತ್ತು ಹೇಳಿಕೆ I, ಹೇಳಿಕೆ II ರ ವಿವರಣೆಯಾಗಿದೆ.
(2) ಹೇಳಿಕೆ I ಸರಿ ಆದರೆ ಹೇಳಿಕೆ II ತಪ್ಪು.
(3) ಎರಡೂ ಹೇಳಿಕೆಗಳು ಸರಿ ಮತ್ತು ಹೇಳಿಕೆ I, ಹೇಳಿಕೆ II ರ ವಿವರಣೆ ಅಲ್ಲ.
(4) ಹೇಳಿಕೆ II ಸರಿ ಆದರೆ ಹೇಳಿಕೆ I ತಪ್ಪು.

94. 'LED' ವಿಸ್ತರಿಸಿ.

(1) ಲೈಟ್ ಎಮಿಟಿಂಗ್ ಡಯೋಡ್
(2) ಲೋ ಎನರ್ಜಿ ಡಿಸ್‌ಪ್ಲೇ
(3) ಲೈಟ್ ಎಮಿಟಿಂಗ್ ಡಿಟೆಕ್ಟರ್
(4) ಲೈಟ್ ಎಮಿಟಿಂಗ್ ಡಿಸ್‌ಪ್ಲೇ

ಕಚ್ಚಾ ಕಾರ್ಯಕ್ಕಾಗಿ ಸ್ಥಳ

95. ಖಾಲಿ ಬಿಟ್ಟ ಸ್ಥಳವನ್ನು ತುಂಬಿರಿ.

ವ್ಯಕ್ತಿಗಳು ನೈತಿಕ ಮೌಲ್ಯಗಳನ್ನು ಕಲಿಯುವ ಮೊದಲ ಸ್ಥಳಗಳು ____(i)____ ಮತ್ತು ____(ii)____.

(1) (i) ಶಾಲೆ ಮತ್ತು (ii) ಶಿಕ್ಷಕರು
(2) (i) ಕುಟುಂಬ ಮತ್ತು (ii) ಸಮಾಜ
(3) (i) ಕುಟುಂಬ ಮತ್ತು (ii) ವಿಶ್ವವಿದ್ಯಾಲಯ
(4) (i) ಕಾಲೇಜು ಮತ್ತು (ii) ಸ್ನೇಹಿತರು

96. 2026 ರ ಜೂನ್ 1 ರಂದು 'ಖೇತ್ ಬಚಾವೊ' ಆಂದೋಲನವನ್ನು ಅಧಿಕೃತವಾಗಿ ________ ಜಿಲ್ಲೆ________ ರಾಜ್ಯದಲ್ಲಿ ಚಾಲನೆ ನೀಡಲಾಯಿತು.

(1) ಗುಂಟೂರು, ಆಂಧ್ರ ಪ್ರದೇಶ
(2) ಯವತ್ಮಾಲ್, ಮಹಾರಾಷ್ಟ್ರ
(3) ಥೇನಿ, ತಮಿಳುನಾಡು
(4) ರೈಸೆನ್, ಮಧ್ಯ ಪ್ರದೇಶ

97. ಕನ್ನಡದ ಹಿರಿಯ ಲೇಖಕ ಹಾಗೂ ಪತ್ರಕರ್ತ ಪಿ. ಲಂಕೇಶ್‌ರವರ ಪತ್ನಿ ಶ್ರೀಮತಿ ಇಂದಿರಾ ಲಂಕೇಶ್‌ರವರ ಆತ್ಮಕತೆಯನ್ನು ಹೆಸರಿಸಿ.

(1) ಹುಳಿ ಮಾವಿನ ಮರ
(2) ಒಂದು ಜೀವನ ಸಾಲದು
(3) ಹುಳಿ ಮಾವು ಮತ್ತು ನಾನು
(4) ಆಷಾಢಭೂತಿತನ

98. ಈ ಕೆಳಗಿನವುಗಳಲ್ಲಿ ಫೀಫಾ ಪುರುಷರ ವಿಶ್ವ ಕಪ್ ಪ್ರಶಸ್ತಿಯನ್ನು ಗೆದ್ದ ರಾಷ್ಟ್ರಗಳನ್ನು ಗರಿಷ್ಠದಿಂದ ಕನಿಷ್ಠದವರೆಗೆ ಸರಿಯಾದ ಕ್ರಮದಲ್ಲಿ ಜೋಡಿಸಿ.

(1) ಜರ್ಮನಿ, ಬ್ರೆಜಿಲ್, ಇಟಲಿ, ಅರ್ಜೆಂಟೀನಾ, ಫ್ರಾನ್ಸ್
(2) ಬ್ರೆಜಿಲ್, ಜರ್ಮನಿ, ಅರ್ಜೆಂಟೀನಾ, ಫ್ರಾನ್ಸ್, ಇಟಲಿ
(3) ಬ್ರೆಜಿಲ್, ಇಟಲಿ, ಜರ್ಮನಿ, ಅರ್ಜೆಂಟೀನಾ, ಫ್ರಾನ್ಸ್
(4) ಬ್ರೆಜಿಲ್, ಅರ್ಜೆಂಟೀನಾ, ಜರ್ಮನಿ, ಇಟಲಿ, ಫ್ರಾನ್ಸ್

99. ಕಾಲೇಜಿನಲ್ಲಿ ನಡೆದ ಸಹಪಠ್ಯ ಚಟುವಟಿಕೆ ಸಮಿತಿಗಳ ಹಂಚಿಕೆ ಸಭೆಯಲ್ಲಿ, ಪ್ರಾಂಶುಪಾಲರು 'ಆಂತರಿಕ ಗುಣಮಟ್ಟ ಭರವಸೆ ಕೋಶ' – (ಐಕ್ಯೂಎಸಿ) ಸಂಯೋಜಕ ಹುದ್ದೆಗೆ ಅಧಿಕೃತ ಕರ್ತವ್ಯ ಸಮಯಕ್ಕಿಂತ ಹೆಚ್ಚಿನ ಸಮಯ ಕೆಲಸ ಮಾಡಬೇಕಾಗುವುದರಿಂದ ಉನ್ನತ ಅರ್ಹತೆ ಹೊಂದಿರುವ ಮಹಿಳಾ ಅಧ್ಯಾಪಕರನ್ನು ಬಿಟ್ಟುಬಿಡಲು ಸೂಚಿಸುತ್ತಾರೆ. ಸಮಿತಿಯ ಸದಸ್ಯರಾಗಿ ನೀವು ಏನು ಮಾಡುತ್ತೀರಿ ?

(1) ನಿಮಗೆ ನೇರವಾಗಿ ಸಂಬಂಧಿಸಿಲ್ಲವಾದ್ದರಿಂದ ಮೌನವಾಗಿರುತ್ತೀರಿ.
(2) ಅವರ ಅರ್ಹತೆಯನ್ನು ಎತ್ತಿ ತೋರಿಸುತ್ತಾ, ಲಿಂಗ ತಾರತಮ್ಯವು ಸಾಂವಿಧಾನಿಕ ಹಕ್ಕುಗಳನ್ನು ಉಲ್ಲಂಘಿಸುತ್ತದೆಯೆಂದು ಬಲವಾಗಿ ಆಕ್ಷೇಪಿಸುತ್ತೀರಿ.
(3) ಪ್ರಾಂಶುಪಾಲರೊಂದಿಗೆ ಸೌಹಾರ್ದಯುತ ಸಂಬಂಧವನ್ನು ಕಾಪಾಡಿಕೊಳ್ಳಲು ಪ್ರಾಂಶುಪಾಲರ ನಿರ್ಧಾರವನ್ನು ಒಪ್ಪುತ್ತೀರಿ.
(4) ಸಂಯೋಜಕರ ಹುದ್ದೆಯ ಬದಲಾಗಿ ಸಹ-ಸಂಯೋಜಕಿ ಹುದ್ದೆಯನ್ನು ಅವರಿಗೆ ನೀಡುವಂತೆ ಪ್ರಾಂಶುಪಾಲರಿಗೆ ಸಲಹೆ ನೀಡುತ್ತೀರಿ.

100. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

**ಹೇಳಿಕೆ I** : ಭಾವನಾತ್ಮಕ ಬುದ್ಧಿವಂತಿಕೆ ಎಂದರೆ ನಿಮ್ಮ ಸ್ವಂತ ಭಾವನೆಗಳನ್ನು ಮತ್ತು ನಿಮ್ಮ ಸುತ್ತಲಿರುವ ಜನರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವ ಹಾಗೂ ನಿರ್ವಹಿಸುವ ಸಾಮರ್ಥ್ಯ.

**ಹೇಳಿಕೆ II** : ಭಾವನಾತ್ಮಕ ಬುದ್ಧಿವಂತಿಕೆಯು ನಾಗರಿಕ ಸೇವಕರಿಗೆ ಒತ್ತಡವನ್ನು ನಿಭಾಯಿಸಲು ಮತ್ತು ಸಕಾರಾತ್ಮಕ ಕೆಲಸದ ವಾತಾವರಣವನ್ನು ಪೋಷಿಸಲು ನೆರವಾಗುವುದಿಲ್ಲ.

ಕೆಳಗಿನ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.

(1) ಹೇಳಿಕೆ I ಸರಿ ಆದರೆ ಹೇಳಿಕೆ II ತಪ್ಪು.
(2) ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿ.
(3) ಹೇಳಿಕೆ I ತಪ್ಪು ಆದರೆ ಹೇಳಿಕೆ II ಸರಿ.
(4) ಹೇಳಿಕೆ I ಮತ್ತು ಹೇಳಿಕೆ II ಎರಡೂ ತಪ್ಪು.

**ಕಚ್ಚಾ ಕಾರ್ಯಕ್ಕಾಗಿ ಸ್ಥಳ**